<u>ದಿನಾಂಕಃ **06-07-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>**ಪಾಟೀ ಸವಾಲುಃ ಶ್ರೀ ಎಸ್.ಎಲ್.ಎಸ್., ಆರೋಪಿ ಪರ ವಕೀಲರಿಂದಃ**</u>

**1.** ನಾನು ಹಾವೇರಿ ನ್ಯಾಯಾಲಯದ ಆವರಣದಲ್ಲಿ ಒಟ್ಟು 02 ಚೆಕ್ ಬೌನ್ಸ ಪ್ರಕರಣವನ್ನು ದಾಖಲಿಸಿರುತ್ತೇನೆ. ಅವುಗಳನ್ನು ಅಲ್ತಾಫ ಮುರಡಗಿ ಹಾಗೂ ಆರೋಪಿಯ ಮೇಲೆ ಮಾಡಿರುತ್ತೇನೆ. ಇವುಗಳನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ಪ್ರಕರಣಗಳು ಮಾಡಿರುವುದಿಲ್ಲ. ನನಗೆ ಇಂಗ್ಲೀಷ ಓದಲು ಬರುವುದಿಲ್ಲ, ಕನ್ನಡ ನಿಧಾನವಾಗಿ ಓದುತ್ತೇನೆ. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ಸಾಕ್ಷಿಗೆ ಪಿ.ಸಿ. ನಂ. 134/2018 ರಲ್ಲಿಯ ದೂರನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಸಾಕ್ಷಿ ಒಪ್ಪಿರುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು **ನಿಡಿ-1** ಅಂತಾ ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಹೇಳುತ್ತಾರೆ ನಾನು ಬಸವರಾಜ ಮಲ್ಲಪ್ಪ ಹಾಲಮ್ಮನವರ (ಜೈ ಕರ್ನಾಟಕ ಬಸು) ಇವರ ವಿರುದ್ಧ ಚೆಕ್ ಬೌನ್ಸ ಪ್ರಕರಣ ದಾಖಲಿಸಿಲ್ಲ ಅಂತಾ ಹೇಳುತ್ತಾರೆ.

**2.** ನಾನು ಮೀನಿನ ವ್ಯಾಪಾರ ಮಾಡುತ್ತೇನೆ. ನಾನು ಕಳೆದ 25 ವರ್ಷಗಳಿಂದ ಈ ವ್ಯಾಪಾರ ನಡೆಸುತ್ತಿದ್ದೇನೆ. ನಾನು ಮೀನಿನ ವ್ಯಾಪಾರ ಮಾಡಲು ನೈರ್ಮಲ್ಯ ಮತ್ತು ಶುಚಿತ್ವ ಇಲಾಖೆಯಿಂದ ಪರವಾನಿಗೆ ಪಡೆದಿಲ್ಲ ಆದರೆ ನಗರಸಭೆಯ ಮಳಿಗೆಯಲ್ಲಿಯೇ ವ್ಯಾಪಾರ ಅವರ ಪರವಾನಿಗೆ ಮೇರೆಗೆ ನಡೆಸುತ್ತಿದ್ದೇನೆ ಅಂತಾ ಹೇಳುತ್ತಾರೆ. ನಾನು ಈ ಪ್ರಕರಣದಲ್ಲಿ ವ್ಯಾಪಾರ ನಡೆಸಲು ನಗರಸಭೆಯವರು ನೀಡಿದ ಪರವಾನಿಗೆಯನ್ನು ಹಾಜರಪಡಿಸಿಲ್ಲ, ಬೇಕಾದಲ್ಲಿ ಹಾಜರಪಡಿಸುತ್ತೇನೆ. ನಾನು ಸೇಲ್ ಟ್ಯಾಕ್ಸ ಕಟ್ಟುವುದಿಲ್ಲ. ನಾನು ವಕೀಲರ ಮೂಲಕ ಇನ್-ಕಂ ಟ್ಯಾಕ್ಸ ಕಟ್ಟುತ್ತೇನೆ. ನಾನು ನನ್ನ ವ್ಯಾಪಾರದ ಕುರಿತು ಜಿಎಸ್‌ಟಿ ನಂಬರ ಪಡೆದುಕೊಂಡಿಲ್ಲ. ಮೀನಿನ ವ್ಯಾಪಾರದಲ್ಲಿ ಯಾರು ಜಿ.ಎಸ್.ಟಿ., ನೋಂದಣಿ ಮಾಡಿಕೊಳ್ಳುವುದಿಲ್ಲ ಅಂತಾ ಹೇಳುತ್ತಾರೆ. ನಾನು ಮೀನಿನ ವ್ಯಾಪಾರ

ಮಾಡುತ್ತೇನೆ ಅಂತಾ ತೋರಿಸುವ ಕುರಿತು ಯಾವುದೇ ದಾಖಲೆ ಹಾಜರಪಡಿಸಿಲ್ಲ. ನಾನು 2018 ರಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ನನ್ನ ಆದಾಯದ ಮೂಲ ಮೀನಿನ ವ್ಯಾಪಾರ ಹಾಗೂ 5-6 ಮನೆಗಳ ಭಾಡಿಗೆ ಇರುತ್ತದೆ. ನಾನು 5-6 ಮನೆಗಳಿಂದ ಭಾಡಿಗೆ ಪಡೆಯುತ್ತಿದ್ದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಾನು ಮೀನಿನ ವ್ಯಾಪಾರ ಮಾಡದೇ ಇರುವುದರಿಂದ ಅದರ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸಾಕ್ಷಿ ನನಗೆ ಸಮಯಾವಕಾಶ ನೀಡಿದರೆ ತಂದು ಹಾಜರಪಡಿಸುತ್ತೇನೆ ಅಂತಾ ಹೇಳುತ್ತಾರೆ. ಅದೇ ರೀತಿ 5-6 ಮನೆಗಳಿಂದ ಭಾಡಿಗೆ ಬಾರದೇ ಇರುವುದರಿಂದ, ನಾನು ದಾಖಲೆಗಳನ್ನು ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ.

**3.** ಈ ಹಿಂದೆ ನನ್ನ ಮೇಲೆ ಪೋಲಿಸರು 5-6 ಪ್ರಕರಣಗಳನ್ನು ದಾಖಲಿಸಿದ್ದರು ಅವುಗಳಲ್ಲಿ ಈಗ 3 ಚಾಲ್ತಿಯಲ್ಲಿರುತ್ತವೆ. ನಾನು ಕೆವಿಜಿ ಬ್ಯಾಂಕ್, ಎಸ್.ಬಿ.ಐ., ಬ್ಯಾಂಕ್ ಆಫ್ ಇಂಡಿಯಾ, ಯುನಿಯನ್ ಬ್ಯಾಂಕ್ ಹಾಗೂ ಕರ್ನಾಟಕ ಬ್ಯಾಂಕ್‌ಗಳಲ್ಲಿ ಖಾತೆಯನ್ನು ಹೊಂದಿರುತ್ತೇನೆ. 2015-2016 ನೇ ಸಾಲಿನಲ್ಲಿ ನಾನು ಹೊಂದಿರುವ ಈ ಮೇಲಿನ ಬ್ಯಾಂಕ್‌ಗಳಲ್ಲಿ ರೂ. 3.50 ಲಕ್ಷ ವಿತ್ ಡ್ರಾ ಮಾಡಿಲ್ಲ ಅಂದರೆ ಸಾಕ್ಷಿ, ಹೌದು ನಗದು ಹಣ ಕೊಟ್ಟಿರುತ್ತೇನೆ ಅಂತಾ ಹೇಳುತ್ತಾರೆ.

**4.** ಆರೋಪಿಗೆ ನಾನು ವಕೀಲರ ಮೂಲಕ ನೋಟಿಸ್ ನೀಡಿದ ದಿನಾಂಕ ನೆನಪಿಲ್ಲ. ದಿನಾಂಕಃ 13-02-2020 ರಂದು ಚೆಕ್ ಬೌನ್ಸ ಆಗಿರುತ್ತದೆ. ದೂರನ್ನು ಸಲ್ಲಿಸಲು ಏಕೆ ವಿಳಂಬವಾಗಿರುತ್ತದೆ ಅಂತಾ ಹೇಳಲು ಆಗುವುದಿಲ್ಲ. ವಿಳಂಬದ ಕುರಿತು ಕಾರಣ ನಮೂದಿಸಿರುವುದಿಲ್ಲ ಅಂದರೆ ಸಾಕ್ಷಿ ಪ್ರಕರಣ ದಾಖಲೆಸಲು

ವಿಳಂಬವಾಗಿರುವುದಿಲ್ಲ ಅಂತಾ ಹೇಳುತ್ತಾರೆ. ನಾನು ದೂರನ್ನು ಯಾವ ದಿನಾಂಕ ದಾಖಲಿಸಿರುತ್ತೇನೆ ಅಂತಾ ನೆನಪಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 06-7-2027**

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.